**ಓ ಎಸ್ ನಂಃ 325-14**
**ಡಿ ಡಬ್ಲ್ಯೂ ಃ 3**

**ದಿಃ 23.02.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಆರ್ ಸಿ ಕೆ ವಕೀಲರಿಂದ**

6. ನಾನು ಸೋಲೂರು ಹೋಬಳಿಯ ಗೊರೂರು ದಾಖಲೆಯ ಗುಡ್ಡಯ್ಯನ ಪಾಳ್ಯದಲ್ಲ್ ವಾಸವಿರುತ್ತೇನೆ. ಈಗಲೂ ಅಲ್ಲೇ ವಾಸವಿದ್ದೇನೆ. ನನಗೆ ಸಿದ್ದಲಿಂಗಯ್ಯ, ಜಿ.ಮಂಜುನಾಥ್, ಎನ್.ಹರೀಶ್ ಪರಿಚಿತರು ಅಂದರೆ ಸರಿ. ಸಿದ್ದಲಿಂಗಯ್ಯರವರು ನಮ್ಮ ಹೋಬಳಿಯವರು ಅಂದರೆ ಸರಿ. ಜಿ.ಮಂಜುನಾಥ್‌ರವರು ಎಣ್ಣೆಗೆರೆ ಗ್ರಾಮದವರು ಅಂದರೆ ಸರಿ. ಎನ್.ಹರೀಶ್‌ರವರು ಬೆಂಗಳೂರಿನವರು ಅಂದರೆ ಸರಿ. ಆ ಮೂರು ಜನ ಸುಮಾರು 20 ವರ್ಷಗಳಿಂದ ಪರಿಚಿತರು. ಸಿದ್ದಲಿಂಗಯ್ಯ ರವರು ನನಗೆ ಹಸುಗಳನ್ನು ಖರೀದಿಸುತ್ತಿದ್ದುದರಿಂದ ಪರಿಚಯ ಆಗಿರುತ್ತದೆ. ಜಿ.ಮಂಜುನಾಥ್‌ರವರು ಇಟ್ಟಿಗೆ ಫ್ಯಾಕ್ಟರಿಯಿಂದ ತೆಗೆದುಕೊಳ್ಳಲು ಹೋದಾಗ ಪರಿಚಯ ಆಗಿರುತ್ತದೆ. ಎನ್.ಹರೀಶ್‌ರವರು ಸದರಿ ಸಿದ್ದಲಿಂಗಯ್ಯರವರ ಮುಖಾಂತರ ಪರಿಚಯ ಆಗಿರುತ್ತದೆ. ನಾನು ಮೂಲತಃ ವ್ಯವಸಾಯಗಾರ. ನನ್ನ ಹೆಸರಿನಲ್ಲಿ ಸ.ನಂ.33/10, 33/7 ದ 33/5 ರಲಲಿ ನನ್ನ ಜಮೀನುಗಳಿವೆ. ಆ ಮೂರು ಸ್ವತ್ತುಗಳು ನನ್ನ ತಂದೆಯಿಂದ ನನಗೆ ಬಂದಿರುತ್ತದೆ.

7. ನಾನು ಕೃಷಿಕ ಎಂದು ತೋರಿಸಲು ಸದರಿ ಮೂರು ಸ್ವತ್ತಿನ ಆರ್ ಟಿ ಸಿ ಗಳನ್ನು ಅಥವಾ ಇತರ ದಾಖಲೆಗಳನ್ನು ಹಾಜರುಪಡಿಸಬಹುದು. ಮೇಲೆ ಹೇಳಿದ ಮೂರು ಸ್ವತ್ತುಗಳು ಖುಷ್ಕಿಯಾಗಿದ್ದು ಅದರಲ್ಲಿ ರಾಗಿ, ತೆಂಗು, ಕಾಕಡ ಹೂವನ್ನು ಸುಮಾರು 25 ವರ್ಷಗಳಿಂದ ಬೆಳೆಯುತ್ತೇವೆ. ನಾನು 1991 ರಿಂದ ಪ್ರತ್ಯೇಕವಾಗಿ ವಾಸವಿರುತ್ತೇನೆ. ನನಗೆ ವರ್ಷಕ್ಕೆ ರೂ. 1 ಲಕ್ಷ ವರಮಾನ ಇರುತ್ತದೆ. ನನಗೆ ಆ ರೀತಿ ವರಮಾನ ಬರುತ್ತದೆ ಎಂದು ತೋರಿಸಲು ದಾಖಲೆ ಇರುವುದಿಲ್ಲ. ವಾದಿ ನನಗೆ ಸಂಬಂಧಿಕರು. ಅವರು ಯಾವ ರೀತಿ ಸಂಬಂಧ ಅಂದರೆ ಪರಿಚಯ ಅಷ್ಟೆ. ನನಗೆ ವಾದಿ ಖುದ್ದಾಗಿ 25 ವರ್ಷದಿಂದ ಪರಿಚಯ. ನನ್ನ ಪತ್ನಿ ಹೆಸರು ಜಯಮ್ಮ. ನನ್ನ ಪತ್ನಿ ನನ್ನ ಜೊತೆ ವಾಸ ಇದ್ದು ಅವರಿಗೆ ಅಸೌಖ್ಯ ಇರುತ್ತದೆ.

8. ವಾದಿಗೂ ನನಗೂ ಮಾರಾಟ ಮಾಡುವ ಕರಾರು ಆಗಿರುವುದರಿಂದ ಪರಿಚಯ. ದಿಃ23.01.2003 ಕ್ಕಿಂತ 10 ದಿನ ಮುಂಚೆ ವಾದಿ ಮಾರಾಟ ಮಾಡುತ್ತೇನೆಂದು ಸಿದ್ದಲಿಂಗಯ್ಯ, ಜಿ.ಮಂಜುನಾಥ್ ಮತ್ತು ವಕೀಲರು ರಂಗಯ್ಯನವರ ಸಮ್ಮುಖದಲ್ಲಿ ಸೋಲೂರಿನಲ್ಲಿ ಹೇಳಿದರು.

ಅವರು ಒಟ್ಟು ರೂ.2 ಲಕ್ಷಕ್ಕೆ ಮಾರಾಟ ಮಾಡುತ್ತೇನೆಂದು ಹೇಳಿದರು. ಅವರ ಹೆಸರಿನಲ್ಲಿ 2 ಎಕರೆ 29 ಗುಂಟೆ ಇದೆ ಎಂದು ಹೇಳಿದರು. ಮಾತುಕತೆ ಆ ದಿನವೇ ಆಗಿ ಬೆಲೆ ನಿಷ್ಕರ್ಷ ಆಯಿತು. ನಂತರ ರೂ 1ವರೆ ಲಕ್ಷಕ್ಕೆ ನಾವು ತೀರ್ಮಾನ ಮಾಡಿದೆವು. ಮೇಲೆ ಹೇಳಿದ ಮೂರು ಜನ ಬಿಟ್ಟು ಆ ಸಮಯದಲ್ಲಿ ಬೇರೆ ಯಾರೂ ಇರಲಿಲ್ಲ. ದಿಃ23.01.2003 ರಂದು ಕರಾರು ಪತ್ರ ಮಾಡಿಸಿಕೊಳ್ಳುವುದು ಎಂದು ತೀರ್ಮಾನಿಸಲಾಯಿತು. ಆ ಕರಾರು ಮಾಡುವ ದಿನ ಹಣವನ್ನು ರೂ. 1 ಲಕ್ಷ 40 ಸಾವಿರ ನೀಡುವುದೆಂದು ಹಾಗೂ ಬಾಕಿ ಹಣವನ್ನು ಕ್ರಯ ನೋಂದಣಿ ಮಾಡುವ ದಿನ ಎಂದು ತೀರ್ಮಾನಿಸಲಾಯಿತು. ಕರಾರು ಪತ್ರವನ್ನು ಮಾಗಡಿಯಲ್ಲಿ ಬೆರಳಚ್ಚು ಮಾಡಿಸಿರುವುದು. ಆ ಕರಾರುಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಕರಾರು ಪತ್ರ ಬರೆಯಲು ಮಾಹಿತಿ ಕೊಟ್ಟವರು ವಕೀಲರು.

9. ಈ ಹಂತದಲ್ಲಿ ಆ ಕರಾರುಪತ್ರ ಮಾಡುವ ಸಂದರ್ಭದಲ್ಲಿ ಯಾರು ಹಾಜರಿದ್ದರು ಎಂಬ ಪ್ರಶ್ನೆ ಸಮಂಜಸ ಪ್ರಶ್ನೆ ಅಲ್ಲ ಹಾಗೂ ಆ ಕರಾರು ಪತ್ರದ ಮೇಲೆ ದಾವೆ ಡಿಕ್ರಿ ಆಗಿದೆ ಎಂದು 14ನೇಪ್ರತಿವಾದಿ ಪರ ವಕೀಲರು ತಕರಾರು ಮಾಡಿದ್ದು, ವಾದಿ ಪರ ವಕೀಲರು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಕರಾರು ಪತ್ರದ ವಿಚಾರಗಳನ್ನು ಹೇಳಿರುವುದರಿಂದ ಹಾಗೂ ಆ ತೀರ್ಪನ್ನು ಆರ್ ಎಫ್ ಎ ಮೂಲಕ ಪ್ರಶ್ನಿಸಿರುವುದರಿಂದ ಆ ಕರಾರು ಪತ್ರದ ಬಗ್ಗೆ ಪ್ರಶ್ನಿಸಲು ಸಮಂಜಸ ಇರುತ್ತದೆ ಎಂದು ನುಡಿದಿರುತ್ತಾರೆ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಕರಾರು ಪತ್ರದ ವಿಚಾರಗಳನ್ನು ತಿಳಿಸಿರುವುದರಿಂದ ಪ್ರಶ್ನಿಸಲು ಅನುಮತಿ ನೀಡಲಾಯಿತು.

10. ಕರಾರು ಪತ್ರ ಬೆರಳಚ್ಚು ಮಾಡುವಾಗ ವಕೀಲರು ಹಾಜರಿದ್ದರು. ಅವರು ಬಿಟ್ಟು ಸಿದ್ದಲಿಂಗಯ್ಯ ಇದ್ದರು. ಕರಾರು ಪತ್ರವನ್ನು ಕನ್ನಡ ಭಾಷೆಯಲ್ಲಿ ಬೆರಳಚ್ಚು ಮಾಡಿದ್ದು ಅದು ಮೂರು ಪುಟಗಳಲ್ಲಿರುತ್ತದೆ. 100 ರೂ. ನ ಎರಡು ಚಾಪಾ ಕಾಗದಗಳನ್ನು ವಾದಿ ತಂದಿರುತ್ತಾರೆ. ಬೆರಚಳ್ಳು ಆದ ನತರ ವಕೀಲರು ರಂಗಯ್ಯ, ಸಿದ್ದಲಿಂಗಯ್ಯ ಹಾಗೂ ಜಿ.ಮಂಜುನಾಥ್ ರವರು ಸಹಿ ಮಾಡಿದರು. ಕರಾರು ಪತ್ರ ಆದಾಗ ರೂ. 1 ಲಕ್ಷ 40 ಸಾವಿರವನ್ನು ನಗದಾಗಿ ನೀಡಿರುತ್ತೇನೆ. ಕರಾರು ಪತ್ರ ನೋಂದಣಿ ಮೂರು ತಿಂಗಳೊಳಗೆ ಮಾಡಿಕೊಳ್ಳುವುದು ಎಂದು ಮಾತುಕತೆ ಆಯಿತು. ಅದೇದಿನ ನೋದಣಿ ಮಾಡಿಕೊಳ್ಳಲು ನನಗೆ ಹಣಕಾಸಿನ ತೊಂದರೆ ಇತ್ತು. ಆ ರೂ. 1 ಲಕ್ಷ 40 ಸಾವಿರ ನನ್ನ ಮನೆಯಲ್ಲೇ ಇತ್ತು. ಆ ಹಣ ಗೊರೂರು ಗ್ರಾಮದ ಜಮೀನು ಸ.ನಂ.31 ಮಾರಿದ ಬಾಬ್ತು ನನ್ನಲ್ಲಿತ್ತು. ಆ ಜಮೀನು ಮಾರಿದ ದಿನಾಂಕ ಗೊತ್ತಿಲ್ಲ. ಸಾಕ್ಷಿ ಪುನಃ 1996ರಲ್ಲಿ ಆ ಜಮೀನು ಮಾರಾಟ ಮಾಡಿದ್ದು ಎಂದು ನುಡಿಯುತ್ತಾರೆ. ನಾನು ಶಾಂತರಘುರಾಮ್ ರವರಿಗೆ ರೂ. 2 ಲಕ್ಷ 25 ಸಾವಿರಕ್ಕೆ ಮಾರಾಟ ಮಾಡಿರುತ್ತೇನೆ. ಆ ಜಮೀನು 2 ಎಕರೆ 17 ಗುಂಟೆ ಇತ್ತು. ಸದರಿ ಜಮೀನು ಮೂಲತಃ ನನ್ನ ತಂದೆಯದ್ದು ಇತ್ತು. ಮಾರಾಟ ಮಾಡಿದಾಗ ನನ್ನ ಹೆಸರಿನಲ್ಲಿತ್ತು. ಆ ಜಮೀನಿನ ದಾಖಲೆಗಳು ಈಗ ಹೊರಟು ಹೋಗಿದೆ. ಖರೀದಿಸಿದವರ ಹೆಸರಿನಲ್ಲಿದೆ. ಹಾಗಾಗಿ

ಹಾಜರುಪಡಿಸಲಾಗುತ್ತಿಲ್ಲ. ಆದರೆ ಭಾಗದ ಪಟ್ಟಿ ಇದೆ. ಆ ಭಾಗದ ಪಟ್ಟಿ ಅಥವಾ ಇತರೆ ದಾಖಲೆ ಹಾಜರುಪಡಿಸಬಹುದು. ಆ ಕ್ರಯಪತ್ರದ ನಕಲು ನನ್ನ ಬಳಿ ಇಲ್ಲ. ಅವರು ಆ ಹಣವನ್ನು ಚೆಕ್ ಮತ್ತು ನಗದಾಗಿ ಕೊಟ್ಟಿರುತ್ತಾರೆ. ನಿರ್ದಿಷ್ಟವಾಗಿ ಎಷ್ಟು ಹಣ ನಗದಾಗಿ ಹಾಗೂ ಚೆಕ್ ನ ಮೂಲಕ ಕೊಟ್ಟಿದ್ದಾರೆಂದು ಗೊತ್ತಿಲ್ಲ. ಆ ಚೆಕ್ಕನ್ನು ನನ್ನ ಖಾತೆಗೆ ಹಾಕಿರುವುದಿಲ್ಲ ಬೇರೇಯವರ ಖಾತೆಗೆ ಹಾಕಿರುತ್ತಾರೆ.

11. ಸ.ನಂ.31 ನನ್ನ ಹೆಸರಿನಲ್ಲಿ ಇದ್ದದ್ದೇ ಇಲ್ಲ ಹಾಗೂ ಹಾಗಾಗಿ ನಾನು ಅದನ್ನು ಮಾರಕ್ಕೇನೆ ಸಾಧ್ಯ ಇಲ್ಲ ಅಂದರೆ ಸರಿಯಲ್ಲ. ಯಾವುದೇ ಆಸ್ತಿ ಮಾರಾಟ ಮಾಡದೇ ಇದ್ದರೂ ಕೂಡಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಹೇಳಿದಂತೆ ಕ್ರಯದ ಕರಾರು ಪತ್ರ ದಿಃ23.01.2003 ರಂದು ಆಗಿರುವುದಿಲ್ಲ ಹಾಗೂ ವಾದಿಗೆ ಯಾವುದೇ ಹಣವನ್ನು ನೀಡಿಲ್ಲ ಅಂದರೆ ಸರಿಯಲ್ಲ. ನಾನು, ಸಿದ್ದಲಿಂಗಯ್ಯ ಹಾಗೂ ಇತರರು ಸೇರಿ ನಾನು ಹೇಳಿದಂತ ಆ ಕರಾರು ಪತ್ರವನ್ನು ಸೃಷ್ಟಿಸಿಕೊಂಡಿದ್ದು ಅಂದರೆ ಸರಿಯಲ್ಲ. ನಾನು ಮಾರಾಟ ಮಾಡಿದ ಆ ಸ್ವತ್ತು ದಾಬಸ್ ಪೇಟೆ ಮಾಗಡಿ ರಸ್ತೆಗೆ ಹೊಂದಿಕೊಂಡಂತೆ ಇದೆ. ದಾವಾ ಸ್ವತ್ತು ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿದೆ ಅಂದರೆ ಸರಿ.

12. 2003 ರಲ್ಲಿ ದಾವಾ ಸ್ವತ್ತಿಗೆ ಮಾರುಕಟ್ಟೆ ಧಾರಣೆ ಕಡಿಮೆ ಅಂದರೂ ರೂ. 50 ಲಕ್ಷ ಇತ್ತು ಅಂದರೆ ಸರಿಯಲ್ಲ. ಸರ್ಕಾರ ನಿಗಧಿ ಮಾಡಿರುವ ಬೆಲೆಯ ಪ್ರಕಾರದಲ್ಲೇ ಕೂಡಾ ಎಕರೆಗೆ ರೂ.4 ಲಕ್ಷ ಬೆಲೆ ಇತ್ತು ಅಂದರೆ ಸರಿ. ನಾನು, ಸಿದ್ದಲಿಂಗಯ್ಯ, ಜಿ.ಮಂಜುನಾಥ್ ರವರು ಸೇರಿ ಕ್ರಯದ ಕರಾರು ಪತ್ರವನ್ನು ವಾದಿ ಮಾರಾಟ ಮಾಡುತ್ತಾರೆಂದು ಸೃಷ್ಟಿ ಮಾಡಿಕೊಂಡಿದ್ದೆವು ಅಂದರೆ ಸರಿಯಲ್ಲ. ದಿಃ15.03.2003 ರಂದು ನಾನು ಪುನಃ ರೂ. 8 ಸಾವಿರ ವಾದಿಗೆ ಕೊಟ್ಟಿರುತ್ತೇನೆ. ಉಳಿಕೆ ನೋಂದಣಿ ಸಮಯದಲ್ಲಿ ಕೊಡುತ್ತೇನೆಂದು ಹೇಳಿದ್ದೆ. ಆ ರೂ. 8 ಸಾವಿರ ವನ್ನು ನಗದಾಗಿ ನೀಡಿರುತ್ತೇನೆ. ಆ ಸಮಯದಲ್ಲಿ ಸಿದ್ದಲಿಂಗಯ್ಯ, ಜಿ.ಮಂಜುನಾಥ್ ರವರು ಹಾಜರಿದ್ದರು. ಅವರನ್ನು ಬಿಟ್ಟರೆ ಬೇರೆ ಯಾರೂ ಇರಲಿಲ್ಲ ಮತ್ತು ಬೇರೆ ಯಾರೂ ಸಹಿ ಹಾಕಿಲ್ಲ. ಷರಾವನ್ನು ಆ ಬಗ್ಗೆ ಮಾಗಡಿಯಲ್ಲಿ ಬೆರಳಚ್ಚು ಮಾಡಲಾಗಿದೆ.

13. ರೂ. 2 ಸಾವಿರ ಉಳಿಕೆ ಹಣ ಪಡೆದು ಕ್ರಯಪತ್ರವನ್ನು ನೋಂದಣಿ ಮಾಡಿಸಿಕೊಡಿ ಎಂದು ನಾನು ವಾದಿಗೆ ಕೇಳಿದಾಗ ಮಾಡಿಕೊಡುತ್ತೇನೆಂದು ಹೇಳಿ ಸುಮ್ಮನಿದ್ದರು ಹಾಗೂ ಬರಲಿಲ್ಲ. ನಾನು ಆ ರೀತಿ ಬಾಯಿ ಮಾತಿನಲ್ಲಿ ಕೇಳಿರುವುದು. ನಂತರ ನೋಟೀಸು ಕೊಟ್ಟಿರುತ್ತೇನೆ. ಸದರಿ ನೋಟೀಸನ್ನು ಯಾವ ದಿನಾಂಕದಂದು ಕೊಟ್ಟಿರುವುದು ಎಂದು ನನಗೆ ನೆನಪಿಲ್ಲ. ಆ ನೋಟೀಸು ತಲುಪಿರಬೇಕು ಆದರೆ ನನಗೆ ಗೊತ್ತಿಲ್ಲ. ಆ ನಂತರ ನಾನು ದಾವೆ ಸಲ್ಲಿಸಿದೆ. ಮಾತುಕತೆ ಸಂದರ್ಭದಲ್ಲಿ ಕಮ್ಮಲಮ್ಮರವರೆ ಮಾಲೀಕರ ಎಂದು ನೋಡಲು ದಾಖಲೆಯನ್ನು ಪರಿಶೀಲನೆ ಮಾಡಿರುತ್ತೇನೆ. ವಿಲ್ಲನ್ನು ಪರಿಶೀಲನೆ ಮಾಡಿರುತ್ತೇನೆ. ಬೇರೆ ದಾಖಲೆ ಮಾಡಿಲ್ಲ. ಕ್ರಯ ಮಾಡುವ ಮುಂಚೆ

ಸಂಬಂಧಪಟ್ಟ ಹಕ್ಕು ದಾಖಲೆಗಳು ಹಾಗೂ ಕಂದಾಯ ದಾಖಲೆಗಳನ್ನು ಪರಿಶೀಲನೆ ಮಾಡುತ್ತಾರೆ ಅಂದರೆ ಸರಿ. ಅಲ್ಲದೇ ಆ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ವ್ಯಾಜ್ಯಗಳಿವೆಯಾ ಎಂದು ಕೂಡಾ ಪರಿಶೀಲನೆ ಮಾಡುತ್ತಾರೆ ಅಂದರೆ ಸರಿ. ವಾದಿಯಲ್ಲಿ ದಾವಾ ಸ್ವತ್ತಿಗೆಸಂಬಂಧಪಟ್ಟಂತೆ ವ್ಯಾಜ್ಯ ಇದೆಯಾ ಎಂದು ಕೇಳಿದಾಗ ಇಲ್ಲ ಎಂದು ತಿಳಿಸಿರುತ್ತಾರೆ.

14. ದಿಃ23.01.2003 ರಂದು ಕರಾರು ಪತ್ರಕ್ಕೆ ನಾನು ಎಲ್ಲಾ ಪುಟಗಳಲ್ಲಿ ಸಹಿ ಮಾಡಿರುತ್ತೇನೆ. ಮೇಲೆ ಹೇಳಿದಂತ ಷರಾ ದಿನ ಹಾಗೂ ದಿನಾಂಕ 23.01.2003 ರ ಬಿಟ್ಟು ಬೇರೆ ದಿನ ಕೂಡಾ ಕರಾರು ಪತ್ರದಲ್ಲಿ ಬೆರಳಚ್ಚು ಮಾಡಲಾಗಿದೆ. ಆದರೆ ಯಾರೂ ಕೂಡಾ ಸಹಿ ಮಾಡಿಲ್ಲ. ಕಾರಣ, ಅವರು ಹಣ ತೆಗೆದುಕೊಂಡಿಲ್ಲ. ದಿಃ23.01.2003 ರ ಕರಾರು ಪತ್ರದ ನಕಲನ್ನು ಹಾಜರುಪಡಿಸುತ್ತೇನೆ. ನನ್ನ ಹೆಂಡತಿ ಮಲ್ಲಮ್ಮ ಹಾಗೂ ಇತರರ ವಿರುದ್ದ ಎಂದು ದಾವೆ ಹಾಕಿದ್ದಾರೆ ಅಂದರೆ ಸರಿ. ಸಾಕ್ಷಿಗೆ ಆ ಬಾಬ್ತು ಒ ಎಸ್ 276/2010 ರ ಒಂದು ಆದೇಶದ ಜೆರಾಕ್ಸ್ ಪ್ರತಿಯನ್ನು ತೋರಿಸಿದಾಗ ಹೌದು ಎಂದು ನುಡಿದಿರುತ್ತಾರೆ, ಆದರೆ ಅದರ ದೃಢೀಕೃತ ನಕಲು ಹಾಜರುಪಡಿಸದೇ ಇರುವುದರಿಂದ ಅದನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ.

15. ಒ ಎಸ್ 153/2005 ರಲ್ಲಿ ಈ ಕೇಸಿನ ವಾದಿ ಪ್ರತಿವಾದ ಪತ್ರ ಸಲ್ಲಿಸಿದ್ದಾರೆಂದರೆ ಸರಿ. ಹರೀಶ್ ಮತ್ತು ಪುಷ್ಪ ರವರನ್ನು ಆ ದಾವೆಯಲ್ಲಿ ವಾದಿ ಮತ್ತು ನರಸೇಗೌಡರು ಹರೀಶ್ ರವರಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿರುವುದರಿಂದ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ಆ ದಾವೆಯಲ್ಲಿ ಈ ಕೇಸಿನ ವಾದಿ ಆ ಕರಾರು ಪತ್ರವನ್ನು ಬರೆದುಕೊಟ್ಟಿಲ್ಲ, ಹಣ ಪಡೆದಿಲ್ಲ ಹಾಗೂ ಸೃಷ್ಟಿಸಿಕೊಂಡಿದ್ದಾರೆಂದು ಹೇಳಿದ್ದಾರೆಂದರೆ ಸರಿಯಲ್ಲ. ನಾನು ಅವರ ಪ್ರತಿವಾದ ಪತ್ರವನ್ನು ಓದಿ ತಿಳಿದುಕೊಂಡಿಲ್ಲ. ನನ್ನ ವಕೀಲರು ಕರಾರು ಪತ್ರವನ್ನು ಒಪ್ಪಿಕೊಳ್ಳುತ್ತಿಲ್ಲ ಎಂದು ಹೇಳಿದ್ದಾರೆ. ಆ ದಾವೆಯನ್ನು ಈ ಕೇಸಿನ ವಾದಿ ಕಾರಣಾಂತರದಿಂದ ವಕೀಲರ ಸಂಪರ್ಕದ ಕೊರತೆಯಿಂದ ನಡೆಸಿಲ್ಲ ಅಂದರೆ ಸರಿಯಲ್ಲ. ದಿಃ07.04.2007 ರಲ್ಲಿ ಆದ್ದರಿಂದ ಏಕಪಕ್ಷೀಯ ತೀರ್ಮಾನ ಆಯಿತು ಅಂದರೆ ಸರಿಯಲ್ಲ. ಆರ್ ಎ 73/2008 ರಂತೆ ಸಲ್ಲಿಸಿದ ಮೇಲ್ಮನವಿ ಕೂಡಾ ಸರಿಯಾಗಿ ನಡೆಸದೇ ಕಾರಣಾಂತರದಿಂದ ವಜಾ ಆಗಿದೆ ಅಂದರೆ ಸರಿಯಲ್ಲ. ಆರ್ ಎಸ್ ಎ ನಂ.451/2016 ರಂತೆ ಸಲ್ಲಿಸಿದ ಮೇಲ್ಮನವಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇದೆ ಅಂದರೆ ಸರಿ.

16. ನನ್ನ ಪತ್ನಿ ಮಲ್ಲಮ್ಮ ಮತ್ತು ನರಸೇಗೌಡರ ಜೊತೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಕರಾರು ಪತ್ರವನ್ನು ದಿಃ23.12.2002 ರಂದು ಮಾಡಿಕೊಂಡಿದ್ದರು ಅಂದರೆ ಸರಿ. ನಾನು ಕೂಡಾ ದಾವಾ ಸ್ವತ್ತಿಗೆ ಕರಾರು ಪತ್ರ ಮಾಡಿಕೊಂಡಿದ್ದೇನೆ ಎಂದು ಹೇಳುತ್ತಿರುವುದರಿಂದ ಈಗಾಗಲೇ ನನ್ನ ಹೆಂಡತಿ ಮಾಡಿಕೊಂಡಿರುವ ಕರಾರು ಇರುವಾಗಲೇ ಯಾಕೆ ಮಾಡಿಕೊಂಡೆ ಅಂದರೆ ಸಾಕ್ಷಿ ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ಪತ್ನಿಗೆ ಆದ ಕರಾರು ಪತ್ರದಲ್ಲಿ ರೂ. 1 ವರೆ ಲಕ್ಷ ಪ್ರತಿಫಲದ ಹಣ ಹಾಗೂ ರೂ. 1 ಲಕ್ಷದ 10 ಸಾವಿರ ಮುಂಗಡ ಹಣ ಹಾಗೂ ಉಳಿಕೆ ಹಣ ನೋಂದಣಿ ಸಮಯದಲ್ಲಿ

ಪಾವತಿಸುವುದು ಎಂದು ತೋರಿಸಲಾಗಿದೆ ಅಂದರೆ ನನಗೆ ಗೊತ್ತಿಲ್ಲ. ಅವರು ಆ ಕರಾರು ಪತ್ರದ ಪ್ರಕಾರ ಕ್ರಯಪತ್ರ ಬರೆದುಕೊಡದೇ ಇದ್ದುದರಿಂದ ನೋಟೀಸು ಕೊಟ್ಟು ನಂತರ ದಾವೆ ಹಾಕಿದೇ ಎಂದು ನನ್ನ ಹೆಂಡತಿ ಹೇಳಿದ್ದಾರೆಂದರೆ ನನಗೆ ಗೊತ್ತಿಲ್ಲ. ನನ್ನ ಹೆಂಡತಿ ಹಾಕಿದ ಆ ದಾವೆ ಇನ್ನೂ ವಿಚಾರಣೆಯಲ್ಲಿದೆ ಅಂದರೆ ನನಗೆ ಗೊತ್ತಿಲ್ಲ. ನನ್ನ ಈ ದಾವೆಯ ವಕೀಲರೇ ಆ ದಾವೆಯಲ್ಲಿ ನನ್ನ ಪತ್ನಿಗೆ ವಕೀಲರು ಅಂದರೆ ಗೊತ್ತಿಲ್ಲ. ನಾನು ಹಾಗೂ ನನ್ನ ಹೆಂಡತಿ ಈಗಲೂ ಒಂದೇ ಸೂರಿನಲ್ಲಿ ವಾಸವಿದ್ದೇವೆ ಅಂದರೆ ಸರಿ.ನನಗೆ ಹಾಗೂ ನನ್ನ ಹೆಂಡತಿಗೆ ಪರಸ್ಪರ ನನಗೆ ಆಗಿದೆ ಎಂದು ಹೇಳುವ ಕರಾರು ಪತ್ರ ಹಾಗೂ ನನ್ನ ಹೆಂಡತಿಗೆ ಆದ ಕರಾರು ಪತ್ರದ ಬಗ್ಗೆ ಗೊತ್ತಿದೆ ಅಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**17.** ನನಗೆ ಮೃತ 4 ನೇ ಪ್ರತಿವಾದಿ ನಟರಾಜ್ ಕುಮಾರ್ ರವರು ನನಗೆ ಗೊತ್ತಿಲ್ಲ. ಸಿದ್ದಲಿಂಗಯ್ಯ, ಜಿ.ಮಂಜುನಾಥ್ ಹಾಗೂ ಎನ್.ಹರೀಶ್ ರವರುಗಳು ಈಗ ಯಾವಾಗಲೋ ಒಂದು ಸಾರಿ ಸಂಪರ್ಕಕ್ಕೆ ಸಿಗುತ್ತಾರೆ. ಎನ್.ಹರೀಶ್‌ರವರು ಕೂಡಾ ಈ ಕೇಸಿನ ವಾದಿಯಿಂದ ಕರಾರು ಪತ್ರ ಆಗಿದೆ ಹಾಗೂ ನರಸೇಗೌಡರಿಂದ ಒಂದು ಕರಾರು ಪತ್ರ ದಾವಾ ಸ್ವತ್ತಿಗೆ ಆಗಿದೆ ಎಂದು ಹೇಳಿ ಒ ಎಸ್ **22/14** ರಂತೆ ಸಲ್ಲಿಸಿ ಅದು ವಿಚಾರಣೆಯಲ್ಲಿದೆ ಅಂದರೆ ನನಗೆ ಗೊತ್ತಿಲ್ಲ. ನಾನು ಮಾತುಕತೆ ಆಯಿತು ಎಂದು ಹೇಳುವ ಸಂದರ್ಭದಲ್ಲಿ ದಾವಾ ಸ್ವತ್ತು ಯಾವ ರೀತು ಇತ್ತು ಅಂದರೆ ಸಾಕ್ಷಿ ರಾಗಿ ಬೆಳೆಯುತ್ತಿದ್ದರು. ಈಗ ದಾವಾ ಸ್ವತ್ತಿನಲ್ಲಿ ಏನೂ ಮಾಡುತ್ತಿಲ್ಲ. ದಾವಾ ಸ್ವತ್ತಿನ ಅಕ್ಕಪಕ್ಕೀ ಜಮೀನುಗಳು ಈಗ ಕಮರ್ಷಿಯಲ್ ಕಟ್ಟಡಗಳು, ಹೋಟೆಲ್‌ಗಳು ಹಾಗೂ ಪೆಟ್ರೋಲ್ ಬಂಕ್ ಗಳು ಆಗಿವೆ ಅಂದರೆ ಸರಿ. ಆದ್ದರಿಂದ ಅಲ್ಲಿ ಎಕರೆಗೆ ರೂ. 2 ವರೆ ಕೋಟಿ ಬೆಲೆ ಇದೆ ಅಂದರೆ ಗೊತ್ತಿಲ್ಲ.

**18.** ನಾನು, ಸಿದ್ದಲಿಂಗಯ್ಯ, ಜಿ.ಮಂಜುನಾಥ್ ಹಾಗೂ ಎನ್.ಹರೀಶ್ ಒಳ ಸಂಚು ಮಾಡಿ ಆ ಕರಾರು ಪತ್ರ ಸೃಷ್ಟಿಸಿರುವುದು ಅಂದರೆ ಸರಿಯಲ್ಲ. ಪೋಲಿಸರಿಗೆ ಒ ಎಸ್ **153/2005** ರಂತೆ ದಾವೆ ಸಲ್ಲಿಸಿದ ನಂತರ ನನ್ನ ವಿರುದ್ದ ಪೋರ್ಜರಿ ಮಾಡಿದ್ದೇನೆಂದು ಒಂದು ದೂರು ಸಹ ಕೊಟ್ಟಿದ್ದಾರೆಂದರೆ ಸರಿಯಲ್ಲ. ಸದರಿ ದೂರಿನ ಆಧಾರದ ಮೇರೆಗೆ ವಿಚಾರಣೆ ಮಾಡಿ ಅದು ಸಿವಿಲ್ ಸ್ವರೂಪದ ಕೇಸು ಎಂದು ಹಿಂಬರಹ ಕೊಟ್ಟಿದ್ದಾರೆಂದರೆ ನನಗೆ ಗೊತ್ತಿಲ್ಲ. ವಾದಿಯವರ ಸ್ವತ್ತನ್ನು ಕಬಳಿಸಬೇಕೆಂಬ ಉದ್ದೇಶದಿಂದ ನಾನು, ಸಿದ್ದಲಿಂಗಯ್ಯ, ಜಿ.ಮಂಜುನಾಥ್ ಹಾಗೂ ಎನ್.ಹರೀಶ್‌ರವರು ಒಳ ಸಂಚು ಮಾಡಿರುವುದು ಅಂದರೆ ಸರಿಯಲ್ಲ. ವಾದಿ, ನರಸೇಗೌಡರು ಹಾಗೂ ಇತರರ ವಿರುದ್ದ ದಾವಾ ಸ್ವತ್ತಿಗೆ ನಾನೇ ಮಾಲೀಕರು ಎಂದು ದಾವೆ ಹಾಕಿದ್ದಾರೆಂದರೆ ಸರಿ. 1 ನೇ ಪ್ರತಿವಾದಿ ದಾವಾ ಸ್ವತ್ತು ಅವರಿಗೆ ಸೇರುತ್ತದೆ ಎಂದು ಈ ದಾವೆಯಲ್ಲಿ ಹೇಳುತ್ತಿದ್ದಾರೆಂದರೆ ನನಗೆ ಗೊತ್ತಿಲ್ಲ. ಆ ಕಾರಣದಿಂದ ನಾನು ಈ ಕೇಸಿನ ವಾದಿ ಹಾಗೂ 1 ನೇ ಪ್ರತಿವಾದಿಯಿಂದ ಎರಡೆರಡು ಕರಾರು ಪತ್ರಗಳನ್ನು ಸೃಷ್ಟಿಸಿಕೊಂಡೆ ಅಂದರೆ ಸರಿಯಲ್ಲ.

19. ವಾದಿಗೆ ದಾವಾ ಸ್ವತ್ತು ದಕ್ಕಲಿಲ್ಲವಾದಲ್ಲಿ 1ನೇ ಪ್ರತಿವಾದಿಯಿಂದ ದಾವಾ ಸ್ವತ್ತನ್ನು ಪಡೆದುಕೊಳ್ಳಬೇಕು ಎಂದು ಆ ರೀತಿ ಕರಾರು ಪತ್ರ ಸೃಷ್ಟಿಸಿಕೊಂಡದ್ದು ಅಂದರೆ ಸರಿಯಲ್ಲ. ವಾದಿ ಯಾವುದೇ ಕರಾರುಪತ್ರ ಬರೆದುಕೊಡದೇ ಇದ್ದರೂ ಕೂಡಾ ಸುಳ್ಳು ದಾಖಲೆ ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**